'ಹುಡುಗಿ ಮನೆಯೋರ್ಗೆ ತೋರ್ಸಕ್ಕೆ ಬೇಡ್ವಾ?' ಎಂದದ್ದಕ್ಕೆ ಸುಮ್ಮನೆ ಹಾಲು – ಮೊಸರಿನ ಪ್ಯಾಕೆಟ್ ತೆಗೆದು ಅವಳು ತಂದಿದ್ದ ಬ್ಯಾಗ್‌ಗೆ ಹಾಕಿದನಷ್ಟೆ.

ಸರಸೂಗೆ ಏನೊಂದೂ ತಿಳಿಯಲಿಲ್ಲ. ಹುಡುಗಿಯ ಮನೆಯಲ್ಲಿ ಏನೋ ಆಗಿರಬೇಕು ಎಂದುಕೊಂಡಳು. ಅವಳಷ್ಟೇ ತಡವಾಗಿ ಹಾಲು ತೆಗೆದುಕೊಂಡು ಹೋಗಲು ಬಂದವರು ಅವಳ ಕಡೆ ಮುಖ ತಿರುಗಿಸದೆ ತಮ್ಮ ಕೆಲಸವಾದ ಮೇಲೆ ಅವಸರದಿಂದ ಹೊರಟರು.

ಮನೆಯ ಹತ್ತಿರ ಬಂದಾಗ ಅಂಗಳದಲ್ಲಿ ದಿನಪತ್ರಿಕೆ ಬಿದ್ದಿರಲಿಲ್ಲ. ಆದರೆ ಪಕ್ಕದ ಮನೆಯಾಕೆ ಕಂಡಳು. ಅವರು ಕೊಟ್ಟ ಡಬ್ಬಿಯನ್ನೇ ಹಿಂತಿರುಗಿಸಲಿಲ್ಲ ಎನ್ನುವುದು ನೆನಪಾಗಿ ತೊಳೆದಿಟ್ಟಿದ್ದ ಅದನ್ನು ಕೊಡಲು ಹೋದಳು. ಆಕೆ ತೆಗೆದುಕೊಂಡು ಸರಸೂ ಧನ್ಯವಾದ ಹೇಳುವ ಮುಂಚೆಯೇ ಮಗನ ಹೆಸರು ಕೂಗುತ್ತ ಒಳಗೆ ಹೋದರು. ಸರಸೂಳಲ್ಲಿ ಪ್ರಶ್ನೆಗಳೆದ್ದವು. ಕೊನೆಗೆ ಮನೆಯಲ್ಲಿ ಏನೋ ಹೆಚ್ಚುಕಮ್ಮಿ ಇರಬಹುದು ಎಂದುಕೊಂಡಳು.

'ಹಾಳಾದೋನು ಎಲ್ಲಿದಾನೋ ಏನೋ... ಬರದಿದ್ದರಷ್ಟೆ... ತಿಳಿಸಕ್ಕೇನು ಧಾಡಿ' ಎಂದು ಬಾಲಾಜಿಯನ್ನು ಶಪಿಸಿ, ಕಾಫಿ ಮಾಡಿದಳು. ನಾಗೇಂದ್ರನನ್ನು ಎಬ್ಬಿಸಿ ಅವನಿಗೂ ಕೊಟ್ಟು ತಾನೂ ಕುಡಿದ ಮೇಲೆ ಪ್ರಿಯಾಳನ್ನು ನೋಡಬೇಕೆನ್ನಿಸಿ ಹೊರಟಳು.

ಕಾಲಿಂಗ್ ಬೆಲ್ ಒತ್ತಿದ ಕೂಡಲೆ ಕಾಣಿಸಿಕೊಂಡ ಶಾರದಮ್ಮ ಸರಸೂನ ನೋಡಿ ದೆವ್ವ ನೋಡಿದವಳಂತೆ ಕಣ್ಣರಳಿಸಿ, ಸೆಟೆದು ನಿಂತರು.

'ಇನ್ನೂ ಬದುಕಿದಾಳೋ ಇಲ್ವೋ ಅಂತ ನೋಡಕ್ಕೆ ಬಂದ್ರಾ?'

ಸರಸೂಗೆ ದಿಗ್ಭ್ರಮೆ.

'ಯಾಕೆ? ಏನಾಯ್ತು?' ಗೋಡೆಗೆ ತಲೆ ಡಿಕ್ಕಿ ಹೊಡೆದಂತಾಗಿ ಕೇಳಿದಳು.

'ಯಾವ ಬಾಯಲ್ಲಿ ಹೇಳ್ಲಿ?... ಇನ್ನೂ ಗೊತ್ತಾಗಿಲ್ವಾ?'

'ಏನು ಗೊತ್ತಾಗ್ಬೇಕು?'

ಶಾರದಮ್ಮ ಮುಖ ಪಕ್ಕಕ್ಕೆ ತಿರುಗಿಸಿ, 'ಪೇಪರ್ ನೋಡಿಲ್ವಾ?' ಎಂದು ಟೀಪಾಯ್ ಮೇಲಿದ್ದ ಪೇಪರನ್ನು ಎತ್ತಿ, ಪುಟ ತಿರುಗಿಸಿ ಸರಸೂ ಮುಖದ ಬಳಿ ಹಿಡಿದರು.

ಸೀರಿಯಲ್ ಅತ್ಯಾಚಾರಿಯ ಬಂಧನದ ಶೀರ್ಷಿಕೆಯ ಜೊತೆ ಬಾಲಾಜಿಯ ಫೋಟೊ! ಸರಸೂ ಕಣ್ಣು ಕಪ್ಪಿಟ್ಟು ಕುಸಿದಳು.

ಅವಳಿಗೆ ಎಚ್ಚರವಾದಾಗ ನಾಗೇಂದ್ರ ಪಕ್ಕದಲ್ಲಿ ಕೂತಿದ್ದು ತನ್ನ ಮನೆಯಲ್ಲಿರುವುದು ತಿಳಿಯಿತವಳಿಗೆ. ಹಾಸಿಗೆಯ ಕೊನೆಯಲ್ಲಿ ದಿನಪತ್ರಿಕೆ ಕಾಣಿಸಿತು.

ಇಬ್ಬರೂ ಮಾತನಾಡದೆ ಅದೆಷ್ಟೋ ಹೊತ್ತು ಸುಮ್ಮನೆ ಕುಳಿತಿದ್ದರು. ಸರಸೂಗೆ ಸುತ್ತಮುತ್ತಲಿನ ಶಬ್ದಗಳೆಲ್ಲ ಹಠಾತ್ ಬಂದ್ ಆದಂತೆ ಒಮ್ಮೆ ಅನಿಸಿದರೆ ಎಲ್ಲವೂ ಒಂದಕ್ಕೆ ನೂರರಷ್ಟು ಹೆಚ್ಚಾಗಿ ಕಿವಿಗಪ್ಪಳಿಸಿದಂತೆ ಮತ್ತೊಮ್ಮೆ. ತನ್ನ ಇಷ್ಟು ವರ್ಷದ ಬದುಕು, ಹೋರಾಟವೆಲ್ಲ ತನ್ನ ಕಣ್ಣೆದುರೇ ಧಗಧಗಿಸಿ ಉರಿದಂತೆ. ಬೇಡವೆಂದು ಬಡಿದಾಡಿದರೂ ಮೂಗು ಮುಚ್ಚಿ ತೆರೆದ ಬಾಯಿಗೆ ತನ್ನದೇ ಮಲಮೂತ್ರವನ್ನು ಬಲವಂತದಿಂದ ತಳ್ಳಿದಂತೆ. ಉಸಿರು ಬಿಗಿ ಹಿಡಿದು ಕಣ್ಮುಚ್ಚಿದರೂ ನೇತು ಹಾಕಿದ ತನ್ನದೇ ಹೃದಯದ ನರಗಳ ಸಾಲಿನ ಪೆರೇಡು ಸಾಗಿದಂತೆ. ಎಲ್ಲಿಂದಲೋ ತೂರಿಬಂದ ರಾಮಚಂದ್ರನ ಆಕೃತಿ ದೈನ್ಯತೆಯ ಭಂಗಿಯಲ್ಲಿ ನಿಂತುಕೊಂಡು ಮಾತೇ ಹೊರಡದೆ ಬಾಯಾಡಿಸುತ್ತಿದ್ದಂತೆ. ಸಮಾಧಾನಪಡಿಸುವ ಮುಖ ಚಹರೆಯ ಭುವಿ ಕೈ ಚಾಚಿದರೂ ಬಳಿಗೆ ಬರಲು ಸಾಧ್ಯವಾಗದೆ ದೂರ ನಿಂತಂತೆ.